SEVA BHARATHI
सेवा ही परमो धर्मः

ಅಕ್ಟೋಬರ್ - 2025
ಸಂಚಿಕೆ - 10
ಸಂಪುಟ - 06


ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216






## ಕೆ. ವಿನಾಯಕ ರಾವ್ ರವರಿಗೆ ಬೆಂಗಳೂರಿನ APD ಸಂಸ್ಥೆ ಮತ್ತು ಉಡುಪಿಯ ಹೋಂ ಡಾಕ್ಟರ್ ಫೌಂಡೇಶನ್ (ರಿ.), ವತಿಯಿಂದ ಸನ್ಮಾನ

## ಸೇವಾಭಾರತಿಯಿಂದ 27 ಗಾಲಿಕುರ್ಚಿ ವಿತರಣೆ

## ಬೈಂದೂರು ಶಾಸಕರ ನೇತೃತ್ವದಲ್ಲಿ ಪೂರ್ವಭಾವಿ ಸಭೆ

## ದೇಹ ಬಲಹೀನವಾದರೂ ಸೇವೆಯಿಂದಲೇ ಸಮಾಜಕ್ಕೆ ಸ್ಫೂರ್ತಿಯಾದ ಉಜಿರೆಯ ಕು. ಅಂಜನಾದೇವಿ

ಯಶೋಗಾಥೆ

Mob,9945491241 I E-mail : sevabharathikanyady@gmail.com I Website : www.sevabharathi.org

## ನಮ್ಮೊಂದಿಷ್ಟು

**ಆತ್ಮೀಯರೇ,**

ಡಿಸೆಂಬರ್ ಮೊದಲವಾರ ನಮಗೆಲ್ಲಾ ಒಂದು ಸಂಭ್ರಮದ ದಿನ. ಹೆಮ್ಮೆಯ ಕ್ಷಣವಾಗಲಿದೆ. ಅಂದು ನಮ್ಮ ನೂತನ ಕಟ್ಟಡದಲ್ಲಿ ಕಾರ್ಯಾಲಯ ಸೇವಾನಿಕೇತನದ ಉದ್ಘಾಟನಾ ಸಮಾರಂಭ ನಡೆಯಲಿದೆ. ತಯಾರಿಗಳು ಭರದಿಂದ ಸಾಗಿದೆ.

ಒಂದು ಸೇವಾ ಸಂಸ್ಥೆಯಾಗಿ ಈವರೆಗೆ 21 ವರ್ಷಗಳ ಕಾಲ ಮಾಡಿದ ಸಾಮಾಜಿಕ ಬದ್ಧತೆಗೆ ಮೊದಲ ಹೆಜ್ಜೆಯಾಗಿ ಈ ಒಂದು ಶುಭಾರಂಭವು ಇತರರಿಗೂ ಹಾಗೂ ಇತರೇ ಸಂಸ್ಥೆಗಳಿಗೂ ಮಾದರಿಯಾಗಿ ಮುಂದುವರಿಯಲಿದ್ದು ತನ್ನದೇ ಆದ ರೀತಿಯಲ್ಲಿ ಕಾರ್ಯಾಚರಿಸಲಿದೆ. ಇದಲ್ಲದೆ ಮುಂದಿನ ತಿಂಗಳುಗಳಲ್ಲಿ ಉಳಿದ ಮಹಡಿಗಳನ್ನು ಲೋಕಾರ್ಪಣೆಗೊ -ಳಿಸಲು ಕಂಕಣಬದ್ಧರಾಗಿದ್ದೇವೆ. ಇದಕ್ಕಾಗಿ ಅವಿರತ ಪರಿಶ್ರಮವಿದೆ.

1)ಸೇವಾಧಾಮವು ಬೆನ್ನುಹುರಿ ಅಪಘಾತಕ್ಕೊಳಗಾದವ -ರಿಗೆ ಪುನಶ್ಚೇತನ ಕೇಂದ್ರ, 2)ಸಬಲನಿಯ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನಕ್ಕಾಗಿ 3)ಆರೋಗ್ಯಮ್ (ಅಂಬುಲೆನ್ಸ್ ಸೇವೆ ಮತ್ತು ರಕ್ತದಾನ ಶಿಬಿರಗಳು)- ಈ ಮೂರು ಯೋಜನೆಗಳಲ್ಲದೆ ಸ್ಥಳೀಯವಾಗಿ ಅನಿವಾರ್ಯವಾದ ಯೋಜ- -ನೆಗಳನ್ನು ಹಮ್ಮಿಕೊಳ್ಳಲಿದ್ದೇವೆ. ತಮ್ಮೆಲ್ಲರ ಸಹಕಾರವು ಅಗತ್ಯವಿದೆ. ನಮ್ಮ ಕೆಲಸ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ ಬೆಂಗಳೂರಿನ APD ಯಿಂದ ಮತ್ತು ಉಡುಪಿ ಜಿಲ್ಲೆಯ ಹೋಂ ಡಾಕ್ಟರ್ ಫೌಂಡೇಶನ್ ನಿಂದ ಗೌರವಗಳು ಪ್ರಾಪ್ತಿಯಾಗಿದೆ.

ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯ- -ನ್ನು ಹೊಂದಿದ್ದು 28ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿಯನ್ನು ವಿತರಿಸಲಾಯಿತು. ಮಂಗ - -ಳೂರಿನಲ್ಲಿ 3 ಮಂದಿ, ಹೊನ್ನಾವರದಲ್ಲಿ 3 ಮಂದಿ, ಉಡುಪಿಯಲ್ಲಿ 3 ಮಂದಿ ತರೀಕೆರೆಯಲ್ಲಿ 6 ಮಂದಿಗೆ, ಸೇವಾಧಾಮ ಪುನಶ್ಚೇತನ ಕೇಂದ್ರ, ಸೌತಡ್ಕದಲ್ಲಿ 7 ಮಂದಿ ದಿವ್ಯಾಂಗರಿಗೆ ದಾನಿಗಳ ಸಮ್ಮುಖದಲ್ಲಿ ಮತ್ತು ಇತರೆ ಜಿಲ್ಲೆಗಲ್ಲಿ 6 ಮಂದಿಗೆ ಗಾಲಿಕುರ್ಚಿ ಹಸ್ತಾಂತರಿಸಿ ಅವರ ವಿಶ್ವಾಸ ಬದುಕಿಗಾಗಿ ಧೈರ್ಯ ತುಂಬಿದ್ದೇವೆ.

ಪ್ರತಿ ವರ್ಷವೂ ಆಚರಿಸುವಂತೆ ಈ ವರ್ಷವೂ ದೀಪಾವಳಿ ಹಬ್ಬವನ್ನು ಸೇವಾಧಾಮದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು.

**ಒಟ್ಟಿನಲ್ಲಿ ಸೇವಾಕಾರ್ಯಗಳು ನಿರಂತರತೆಯಿದೆ.**



**ಸೇವಾ ಹಿ ಪರಮೋ ಧರ್ಮಃ**
ವಂದನೆಗಳೊಂದಿಗೆ
**ತಮ್ಮವ**
**ಕೆ. ವಿನಾಯಕ ರಾವ್**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು**
**574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ**
**574 198 .: 94482 54888**

### ನಮ್ಮ ತಂಡ :

| | | |
|---|---|---|
| ಶ್ರೀಮತಿ ಸ್ವರ್ಣಗೌರಿ | - | ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | - | ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | - | ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಟ್ರಸ್ಟಿ |
| ಶ್ರೀ ಪೃಥ್ವಿಶ್ | - | ಟ್ರಸ್ಟಿ |

### ಸಲಹಾ ಮಂಡಳಿ :

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಡಾ. ಎ. ಜಯಕುಮಾರ್ ಶೆಟ್ಟಿ
ಶ್ರೀಮತಿ ಮನೋರಮ ಭಟ್
ಶ್ರೀ ವಿಜಯ ಕೊಡವೂರು
ಶ್ರೀ ಆದಿತ್ಯ ಕಲ್ಲೂರಾಯ
ಶ್ರೀ ಕಿರಣ್ ರಾಜ್ ಕೆ.

### ಸಂಚಾಲಕರು :

ಶ್ರೀ ಕೆ. ಪುರಂದರ ರಾವ್

# ಕೆ. ವಿನಾಯಕ ರಾವ್ ರವರಿಗೆ ಬೆಂಗಳೂರಿನ APD ಸಂಸ್ಥೆಯಿಂದ ಸನ್ಮಾನ




**ಬೆಂಗಳೂರು(ಅ.04):** ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನೀಡಿದ ಅನುಪಮ ಸೇವೆಯನ್ನು ಗುರುತಿಸಿ ಕನ್ಯಾಡಿ ಸೇವಾಭಾರತಿಯ ಖಜಾಂಚಿ ಮತ್ತು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರನ್ನು ಬೆಂಗಳೂರು ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ ಸಂಸ್ಥೆಯು 9ನೇ ಎನ್ ಎಸ್ ಹೇಮಾ ಮೆಮೋರಿಯಲ್ ಅವಾರ್ಡ್ 2025 ಕಾರ್ಯಕ್ರಮದಲ್ಲಿ ಬೇರೆ- ಬೇರೆ ಸಂಸ್ಥೆಯಲ್ಲಿ ಸೇವೆಯನ್ನು ಮಾಡಿದ 10 ಮಂದಿ ಸಾಧಕರಲ್ಲಿ ಒಬ್ಬರಾಗಿ ದಿವ್ಯಾಂಗರ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆಯನ್ನು ಮಾಡಿದ ಶ್ರೀಯುತರನ್ನು ಗುರುತಿಸಿ ಸನ್ಮಾನಿಸಲಾಯಿತು.

# ಕೆ. ವಿನಾಯಕ ರಾವ್ ರವರಿಗೆ ಉಡುಪಿ ಜಿಲ್ಲೆಯ ಹೋಂ ಡಾಕ್ಟರ್ ಫೌಂಡೇಶನ್ (ರಿ.), ವತಿಯಿಂದ ಸನ್ಮಾನ



**ಕೊಳಲಗಿರಿ(ಅ.19):** ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸೇವಾಧಾಮ ಪುನಶ್ಚೇತನ ಕೇಂದ್ರದ ಮೂಲಕ ಪುನಶ್ಚೇತನವನ್ನು ನೀಡುತ್ತಾ ಹಾಗೆ ಆರೋಗ್ಯ ತಪಾಸಣಾ, ರಕ್ತದಾನ ಶಿಬಿರ, ಮಹಿಳಾ ಸಬಲೀಕರಣ ಹೀಗೆ ಹಲವಾರು ಸೇವಾ ಚಟುವಟಿಕೆಗಳನ್ನು ನಡೆಸುತ್ತಿರುವ ಕನ್ಯಾಡಿ ಸೇವಾಭಾರತಿ ಖಜಾಂಚಿ ಮತ್ತು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರನ್ನು ಹೋಂ ಡಾಕ್ಟರ್ ಫೌಂಡೇಶನ್(ರಿ.), ವತಿಯಿಂದ ಉಡುಪಿ ಜಿಲ್ಲೆಯ ಕೊಳಗಿರಿ ಸ್ವರ್ಗ ಆಶ್ರಮದಲ್ಲಿ ನಡೆಸಿದಂತಹ ದೀಪಾವಳಿ ಆಚರಣೆ 2025 ಕಾರ್ಯಕ್ರಮದಲ್ಲಿ ಗುರುತಿಸಿ ಡಾ. ಶಶಿಕಿರಣ್ ಶೆಟ್ಟಿರವರ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

# ಕನ್ಯಾಡಿ ಸೇವಾಭಾರತಿಯಿಂದ 7 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ




**ಸೌತಡ್ಕ (ಅ. 20):** ಬೆಂಗಳೂರು ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿಯ ಸಹಕಾರದೊಂದಿಗೆ ಸೇವಾಭಾರತಿಯ ಅಂಗಸಂಸ್ಥೆಯಾದ ಸೇವಾಧಾಮದಿಂದ ಗುರುತಿಸಲ್ಪಟ್ಟ ಬೆನ್ನುಹುರಿ ಅಪಘಾತಕ್ಕೊಳಗಾದ ಶಿಬಾಜೆಯ ಶ್ರೀ ಮೋಹನ್ ಪಿ.ಬಿ,ಶ್ರೀ ಮಹೇಶ್ ಗುತ್ತಿಗಾರು, ನಿಡ್ಲೆಯ ಶ್ರೀ ಚಂದ್ರಶೇಖರ್ ಭಟ್, ಪುತ್ತೂರಿನ ಶ್ರೀಮತಿ ಜೈನಾಬಿ, ಬದಿಯಡ್ಕದ ಶ್ರೀ ಚಂದ್ರಶೇಖರ್, ಕಡಬದ ಶ್ರೀ ಧನಂಜಯ ಮತ್ತು ಶ್ರೀ ಯೋಗೀಶ್ ಎರ್ಮಾಲ್ ರವರಿಗೆ ಗಾಲಿಕುರ್ಚಿ ವಿತರಣಾ ಕಾರ್ಯಕ್ರಮವನ್ನು ಅಕ್ಟೋಬರ್ 20 ದೀಪಾವಳಿ ಹಬ್ಬದಂದು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮದಲ್ಲಿ ನಡೆಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಪುತ್ತೂರಿನ ಇನ್ನರ್ ವೀಲ್ ಕ್ಲಬ್ ನ ಅಧ್ಯಕ್ಷರಾದ ಶ್ರೀಮತಿ ರೂಪಲೇಖರವರು ಗಾಲಿಕುರ್ಚಿಗಳನ್ನು ಹಸ್ತಾಂತರಿಸಿ ಫಲಾನುಭವಿಗಳಿಗೆ ವಿಶ್ವಾಸದ ಬದುಕಿಗಾಗಿ ಧೈರ್ಯ ತುಂಬಿದರು. ಈ ಸಂಧರ್ಭದಲ್ಲಿ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು, ಫಲಾನುಭವಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಉಡುಪಿಯಲ್ಲಿ 3 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ



**ಉಡುಪಿ (ಅ.19):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಸೆಪ್ಟೆಂಬರ್ ತಿಂಗಳಿನಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆಯಾದ ಸಂದರ್ಭದಲ್ಲಿ 30 ಗಾಲಿಕುರ್ಚಿಯನ್ನು ನೀಡುವುದಾಗಿ ನಿರ್ಧರಿಸಿದ್ದು ಅದರಲ್ಲಿ 3 ಗಾಲಿಕುರ್ಚಿಯನ್ನು ಸೇವಾಧಾಮದಿಂದ ಗುರುತಿಸಲ್ಪಟ್ಟ ಬೆನ್ನುಹುರಿ ಅಪಘಾತಕ್ಕೊಳಗಾದ ಶ್ರೀ ದೀಪಕ್ ಕೊಡವೂರು , ಶ್ರೀ ಪವನ್ ಕಾಪು ಮತ್ತು ಬೈಂದೂರಿನ ಬಾಬುರವರಿಗೆ ಗಾಲಿಕುರ್ಚಿ ವಿತರಣಾ ಕಾರ್ಯಕ್ರಮವನ್ನು ಅಕ್ಟೋಬರ್ 19 ರಂದು ಉಡುಪಿಯಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಸೇವಾಭಾರತಿ ಖಜಾಂಚಿ ಮತ್ತು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿಯ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಬೆನ್ನುಹುರಿ ಅಪಘಾತಕ್ಕೊಳಗಾದ ಉಡುಪಿಯ ಶ್ರೀ ಸರ್ವೋತ್ತಮ್ ಅಮಿನ್, ಕಲ್ಮಾಡಿಯ ಶ್ರೀ ಜಯ ಪೂಜಾರಿ ಮತ್ತು ಮಲ್ಪೆಯ ಶ್ರೀ ಹರೀಶ್ ರವರು ಗಾಲಿಕುರ್ಚಿಗಳನ್ನು ಹಸ್ತಾಂತರಿಸಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಮತ್ತು ಸ್ವಯಂಸೇವಕರಾದ ಶ್ರೀ ಅಖಿಲೇಶ್ ಉಪಸ್ಥಿತರಿದ್ದರು.

## ಕನ್ಯಾಡಿ ಸೇವಾಭಾರತಿಯಿಂದ 3 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಗಾಲಿಕುರ್ಚಿ ವಿತರಣೆ



**ಹೊನ್ನಾವರ (ಅ.19):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಸೆಪ್ಟೆಂಬರ್ ತಿಂಗಳಿನಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆಯಾದ ಸಂದರ್ಭದಲ್ಲಿ 30 ಗಾಲಿಕುರ್ಚಿಯನ್ನು ನೀಡುವುದಾಗಿ ನಿರ್ಧರಿಸಿದ್ದು ಅದರಲ್ಲಿ 3 ಗಾಲಿಕುರ್ಚಿಯನ್ನು ಬೆನ್ನುಹುರಿ ಅಪಘಾತಕ್ಕೊಳಗಾದ ಹೊನ್ನಾವರದ ಶ್ರೀ ಸುಬ್ರಹ್ಮಣ್ಯ ಗಣೇಶ ಹೆಗಡೆ, ಕುಮಟಾದ ಶ್ರೀ ಭಾರ್ಗವ್ ಮತ್ತು ಶ್ರೀಮತಿ ದೀಪಾ ವಿಶ್ವನಾಥ್ ಗೌಡ ರವರಿಗೆ ಶ್ರೀ ಕ್ಷೇತ್ರ ಬಂಗಾರಮಕ್ಕಿ ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್ , ಹೇಮಾಪುರ ಮಹಾ ಪೀಠಂನ ಶ್ರೀ ಮಾರುತಿ ಗುರೂಜಿಯವರು ಮತ್ತು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಗಾಲಿಕುರ್ಚಿಗಳನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಉಪಸ್ಥಿತರಿದ್ದರು.

## ಮಂಗಳೂರಿನಲ್ಲಿ 3 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ







**ಮಂಗಳೂರು (ಅ.16):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಸೆಪ್ಟೆಂಬರ್ ತಿಂಗಳಿನಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆಯಾದ ಸಂದರ್ಭದಲ್ಲಿ 30 ಗಾಲಿಕುರ್ಚಿಯನ್ನು ನೀಡುವುದಾಗಿ ನಿರ್ಧರಿಸಿದ್ದು ಅದರಲ್ಲಿ 3 ಗಾಲಿಕುರ್ಚಿಯನ್ನು ಸೇವಾಭಾರತಿಯ ಅಂಗಸಂಸ್ಥೆಯಾದ ಸೇವಾಧಾಮದಿಂದ ಗುರುತಿಸಲ್ಪಟ್ಟ ಬೆನ್ನುಹುರಿ ಅಪಘಾತಕ್ಕೊಳಗಾದ ಮಂಗಳೂರಿನ ಶ್ರೀ ವಿಶ್ವನಾಥ ರೈ, ವಾಮಂಜೂರಿನ ಶ್ರೀ ಜನಾರ್ಧನ ಮತ್ತು ಜಾರ್ದೋಲಿಯ ಪ್ರಕಾಶ್ ರವರಿಗೆ ಗಾಲಿಕುರ್ಚಿ ವಿತರಣಾ ಕಾರ್ಯಕ್ರಮವನ್ನು ಅಕ್ಟೋಬರ್ 16 ರಂದು ಮಂಗಳೂರಿನಲ್ಲಿ ನಡೆಸಲಾಯಿತು.


ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಮಂಗಳೂರಿನ ಶ್ರೀಶ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಉಪಾಧ್ಯಕ್ಷರಾದ ಶ್ರೀ ಉದಯ ಶಾಸ್ತ್ರಿ ಹಾಗೂ ಸೇವಾಭಾರತಿ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯದರ್ಶಿ ಶ್ರೀ ಚನ್ನಯ್ಯಸ್ವಾಮಿಯವರು ಗಾಲಿಕುರ್ಚಿಗಳನ್ನು ಹಸ್ತಾಂತರಿಸಿ, ಫಲಾನುಭವಿಗಳಿಗೆ ವಿಶ್ವಾಸ ಬದುಕಿಗಾಗಿ ಧೈರ್ಯ ತುಂಬಿದರು. ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ಕಾರ್ಯಕ್ರಮವನ್ನು ನಿರೂಪಿಸಿ, ಸೇವಾಭಾರತಿ ಟ್ರಸ್ಟಿ ಶ್ರೀ ಪೃಥ್ವೀಶ್ ಧನ್ಯವಾದವಿತ್ತರು.

## ಕಡಬದ ವಾಸುದೇವ ಎಸ್ ರವರಿಂದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ



**ಸೌತಡ್ಕ (ಅ.01):** ಕಡಬ ತಾಲೂಕಿನ ಬೆನ್ನುಹುರಿ ಅಪಘಾತಕ್ಕೊಳಗಾದ ಶ್ರೀ ವಾಸುದೇವ ಎಸ್ ಹಾಗೂ ಕುಟುಂಬಸ್ಥರು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಅಕ್ಟೋಬರ್ 01 ರಂದು ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮದ ಪೀರ್ ಟ್ರೈನರ್ ಶ್ರೀ ಅಂಥೋನಿಯವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

# ಕನ್ಯಾಡಿ ಶ್ರೀ ಶಾರದೋತ್ಸವ ಸಂದರ್ಭದಲ್ಲಿ ಬೃಹತ್ ಆರೋಗ್ಯ ಶಿಬಿರ
# 12 ಮಂದಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಶಿಫಾರಸ್ಸು






**ಕನ್ಯಾಡಿ (ಸೆ. 29):** ಕನ್ಯಾಡಿ ಶ್ರೀ ಶಾರದೋತ್ಸವ ಸಮಿತಿ(ರಿ.), ಇದರ ಆಶ್ರಯದಲ್ಲಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ, ಕನ್ಯಾಡಿ, ಸೇವಾಭಾರತಿ(ರಿ.), ಕನ್ಯಾಡಿ ಮತ್ತು ಕನ್ಯಾಡಿ ಫ್ರೆಂಡ್ಸ್ ಕನ್ಯಾಡಿ ಇವುಗಳ ಸಹಕಾರದಲ್ಲಿ 25 ವರ್ಷದ ಶ್ರೀ ಶಾರದೋತ್ಸವ ಮತ್ತು ರಜತ ಸಂಭ್ರಮವು ಸಪ್ಟೆಂಬರ್ 29 ಮತ್ತು 30 ರಂದು ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಕನ್ಯಾಡಿಯಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಮೊದಲನೇ ದಿನವಾದ 29ನೇ ತಾರೀಕಿನಂದು ಬೃಹತ್ ಆರೋಗ್ಯ ಶಿಬಿರವನ್ನು ಸಹ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉಜಿರೆ ಲಕ್ಷ್ಮಿ ಇಂಡಸ್ಟ್ರೀಸ್ ಕನಸಿನ ಮನೆಯ ಶ್ರೀ ಕೆ ಮೋಹನ್ ಕುಮಾರ್ ರವರು ಉದ್ಘಾಟಿಸಿ ಕನ್ಯಾಡಿಯ ಶಾರದೋತ್ಸವದ ಸಮಯದಲ್ಲಿ ಇಂತಹ ಬೃಹತ್ ಆರೋಗ್ಯ ಶಿಬಿರವನ್ನು ಆಯೋಜಿಸುತ್ತಿರುವುದು ಶ್ಲಾಘನೀಯವಾಗಿದೆ. ಹೆಚ್ಚಿನ ಜನರು ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದು ಶುಭಹಾರೈಸಿದರು.

ಕನ್ಯಾಡಿ -II ಶ್ರೀ ಶಾರದೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ವಿನಾಯಕ ಪ್ರಸ್ತಾವಿಕ ನುಡಿಗಳನ್ನಾಡಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಟೀಮ್ ಈಶ್ವರ್ ಮಲ್ಪೆ ಇವರ ಸಹಕಾರದಲ್ಲಿ 11 ಮಂದಿಗೆ ಉಚಿತವಾಗಿ ಕಿವಿಯ ಶ್ರವಣ ತಪಾಸಣೆ, ಉಡುಪಿ ಪ್ರಸಾದ್ ನೇತ್ರಾಲಯ ಇವರ ಸಹಕಾರದಲ್ಲಿ 64 ಮಂದಿಗೆ ಉಚಿತ ಕಣ್ಣು ತಪಾಸಣೆ ಹಾಗೂ 12 ಮಂದಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಶಿಫಾರಸ್ಸು , ಎ.ಜೆ ಡೆಂಟಲ್ ಕಾಲೇಜು, ಮಂಗಳೂರು, ಭಾರತೀಯ ದಂತ ವೈದ್ಯರ ಸಂಘ (IDA) ಪುತ್ತೂರು, ರೋಟರಿ ಕ್ಲಬ್, ಬೆಳ್ತಂಗಡಿ, ನಂದಗೋಕುಲ ಗೋಶಾಲೆ, ಕಳೆಂಜ ಇವರ ಸಹಕಾರದಲ್ಲಿ 11 ಮಂದಿಗೆ ಉಚಿತ ದಂತ ತಪಾಸಣೆ ಮತ್ತು ಚಿಕಿತ್ಸೆ, ಉಜಿರೆ ಬೆನಕ ಆಸ್ಪತ್ರೆಯ ಸಹಕಾರದಲ್ಲಿ 71 ಮಂದಿಗೆ ಬಿ.ಪಿ ಮತ್ತು ಶುಗರ್ ಪರೀಕ್ಷೆ ಹಾಗೂ ವೈದ್ಯರೊಂದಿಗೆ ಸಮಾಲೋಚನೆಯನ್ನು ನಡೆಸಿಕೊಡಲಾಯಿತು..

ಉಜಿರೆ ಸಿಂಧೂ ಇಲೆಕ್ಟ್ರಿಕಲ್ಸ್ ಶ್ರೀ ಜನಾರ್ದನ, ಧರ್ಮಸ್ಥಳ ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ಚಂದನ್ ಪ್ರಸಾದ್ ಕಾಮತ್, ಡಾ। ದಯಾಕರ್ ಎಂ.ಎಂ. ಪ್ರೊಫೆಸರ್, ಹೆಚ್.ಬಿ.ಡಿ.. ಕೆ.ವಿ.ಜಿ. ಡೆಂಟಲ್ ಕಾಲೇಜು, ಉಡುಪಿ ವಾಕ್ ಮತ್ತು ಶ್ರವಣ ತಜ್ಞರು ಡಾ| ಅಂಕಿತ ಕಲ್ಮಾಡಿ, ಉಡುಪಿ ಪ್ರಸಾದ್ ನೇತ್ರಾಲಯದ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಮಧುಕರ್, ಕನ್ಯಾಡಿ ಸೇವಾಭಾರತಿ(ರಿ.),ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಉಪಸ್ಥಿತರಿದ್ದರು. AJ ಇನ್ಸ್ಟಿಟ್ಯೂಟ್ ಆಫ್ ಡಿಂಟಲ್ ಸೈನ್ಸ್ ನ ಆಶಾ ಪಿಧಮಲೆ, ಬೆನಕ ಆಸ್ಪತ್ರೆಯ ಶ್ರೀ ಪ್ರಧ್ಯೋತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು..



## ಕಲ್ಮಾಡಿಯ ಶ್ರೀ ಜಯ ಪೂಜಾರಿ ರವರಿಂದ ನೂತನ ಕಟ್ಟಡಕ್ಕೆ ದೇಣಿಗೆ

**ಕನ್ಯಾಡಿ (ಅ. 19):** ಬೆನ್ನುಹುರಿ ಅಪಘಾತಕ್ಕೊಳಗಾದ ಕಲ್ಮಾಡಿಯ ಶ್ರೀ ಜಯ ಪೂಜಾರಿ ರವರು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ಸೇವಾಭಾರತಿ ಟ್ರಸ್ಟಿ ಶ್ರೀ ವಿಷ್ಣುಪ್ರಸಾಧ್ ತೆಂಕಿಲ್ಲಾಯ ಮತ್ತು ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.



## ಮಲ್ಪೆಯ ಶ್ರೀ ಹರೀಶ್ ರವರಿಂದ ನೂತನ ಕಟ್ಟಡಕ್ಕೆ ದೇಣಿಗೆ

**ಕನ್ಯಾಡಿ (ಅ. 19):** ಬೆನ್ನುಹುರಿ ಅಪಘಾತಕ್ಕೊಳಗಾದ ಮಲ್ಪೆಯ ಶ್ರೀ ಹರೀಶ್ ರವರು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಮತ್ತು ಸೇವಾಭಾರತಿ ಟ್ರಸ್ಟಿ ಶ್ರೀ ವಿಷ್ಣುಪ್ರಸಾಧ್ ತೆಂಕಿಲ್ಲಾಯ ಮತ್ತು ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

# ಸೇವಾಧಾಮದಲ್ಲಿ ದೀಪಾವಳಿ ಹಬ್ಬದ ಆಚರಣೆ



ಶ್ರೀಮತಿ ವಿದ್ಯಾಬೆಂಡೆಯವರ ಹುಟ್ಟುಹಬ್ಬ ಆಚರಣೆ

**ಸೌತಡ್ಕ (ಅ. 20):** ಮುಂಗಾರಿನ ಮಳೆಯ ಅಬ್ಬರ ಇಳಿದು ಚುಮುಚುಮು ಚಳಿಗಾಲದ ಆರಂಭದಲ್ಲಿ ಬರುವ ಹಬ್ಬವೇ ದೀಪಾವಳಿ. ಈ ಹಬ್ಬ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಹೊಂದಿದ್ದು ಸೌತಡ್ಕದ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಅಕ್ಟೋಬರ್ 20 ರಂದು ದೀಪಾವಳಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಸಮುದಾಯದಿಂದ ದೂರ ಉಳಿಯುವುದು ಮಾನಸಿಕ ಖಿನ್ನತೆಗೆ ಹಾಗೂ ಹಲವು ದ್ವಿತೀಯಾಂತರ ಸಮಸ್ಯೆಗಳಿಗೆ ಒಳಗಾಗಿರುತ್ತಾರೆ. ಇಂತಹ ದಿವ್ಯಾಂಗರನ್ನು ಒಗ್ಗೂಡಿಸಿ ಅವರಿಗೆ ವೈದ್ಯಕೀಯ ಸೌಲಭ್ಯಗಳನ್ನು ನೀಡುವುದರ ಮೂಲಕ ಅವರ ಜೀವನ ಶೈಲಿಯನ್ನು ಸುಲಭಗೊಳಿಸುವ ಪ್ರಯತ್ನ ನಮ್ಮ ಸೇವಾಧಾಮ ಸಂಸ್ಥೆಯಿಂದ ನಿರಂತರವಾಗಿ ನಡೆಯುತ್ತಿದೆ. ಮಂಗಳೂರು CR 3 (India) private limited ನ ಸೀನಿಯರ್ ಎಚ್ ಆರ್ ಎಕ್ಸಿಕ್ಯೂಟಿವ್ ಶ್ರೀ ಗಣೇಶ್ ಟಿ ರವರು ದೀಪಾವಳಿಯ ವಿಶೇಷತೆ ಬಗ್ಗೆ ತಿಳಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ, ಫಲಾನುಭವಿಗಳಿಗೆ, ಆರೈಕೆದಾರರಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ವಿಭಿನ್ನ ಚಟುವಟಿಕೆಗಳನ್ನು ಮಾಡಿ ಜೊತೆಗೆ ನೃತ್ಯ ಪ್ರದರ್ಶನವನ್ನು ನೀಡಿ ಎಲ್ಲರನ್ನು ಮನರಂಜಿಸಲಾಯಿತು. ಹಾಗೇ ಮುಂಡಾಜೆಯ ವಿದ್ಯಾ ಬೆಂಡೆಯವರು ತಮ್ಮ ಹುಟ್ಟುಹಬ್ಬವನ್ನು ಈ ಸಂದರ್ಭದಲ್ಲಿ ಆಚರಿಸಿಕೊಂಡರು ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಅಮೃತಗಳಿಗೆಯಲ್ಲಿ ಅಮೃತ ಹಸ್ತದಲ್ಲಿ ಹಣತೆಯನ್ನು ಹಚ್ಚಿ ಪಟಾಕಿಯನ್ನು ಸಿಡಿಸಿ ದೀಪಾವಳಿಯನ್ನು ಸಂಭ್ರಮಿಸಲಾಯಿತು.

ಈ ಸಂದರ್ಭದಲ್ಲಿ ಮುಂಡಾಜೆಯ ಶ್ರೀ ವಿಶ್ವನಾಥ್ ಬೆಂಡೆ, ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸಂಸ್ಥೆಯ ದಾನಿಗಳು, ಹಿತೈಷಿಗಳು, ಸಲಹಾ ಸಮಿತಿಯ ಸದಸ್ಯರು, ಟ್ರಸ್ಟಿಗಳು, ಫಲಾನುಭವಿಗಳು, ಸನಿವಾಸಿಗಳು, ಆರೈಕೆದಾರರು, ಸ್ವಯಂಸೇವಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಒಟ್ಟು 70 ಮಂದಿ ಭಾಗವಹಿಸಿದ್ದರು. ಸೇವಾಧಾಮದ ಫಿಸಿಯೊಥೆರಪಿಸ್ಟ್ ಕು. ವಿಖ್ಯಾತಿ ಸ್ವಾಗತಿಸಿ, ನಿರೂಪಿಸಿದರು. ಸೇವಾಭಾರತಿಯ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ಧನ್ಯವಾದವಿತ್ತರು.

# ಬೆನ್ನುಹುರಿ ಅಪಘಾತಕ್ಕೊಳಗಾದ ವಿಟ್ಲದ ರವೀಂದ್ರ ನಾಯ್ಕ ಅವರಿಗೆ ಕಲಾಶ್ರಯ ದಾಸಕೋಡಿ ಮೂಲಕ ನಿರ್ಮಾಣಗೊಂಡ ನೂತನ ಮನೆ ಹಸ್ತಾಂತರ



**ಬಂಟ್ವಾಳ (ಅ.15):** ತೆಂಗಿನಮರದಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾಗಿ ಕಾಲುಗಳ ಸ್ವಾಧೀನವನ್ನೇ ಕಳೆದುಕೊಂಡು, ಮಲಗಿದ್ದ ಸ್ಥಿತಿಯಲ್ಲೇ ಇರುವ ವಿಟ್ಲದ ರವೀಂದ್ರ ನಾಯ್ಕ ಅವರಿಗೆ ರಾಜ್ಯ ಧಾರ್ಮಿಕ ಪರಿಷತ್ ಮಾಜಿ ಸದಸ್ಯ ದಾಸಕೋಡಿಯ ಕಲಾಶ್ರಯದ ಕಶೆಕೋಡಿ ಸೂರ್ಯನಾರಾಯಣ ಭಟ್ ಅವರು, ತಮ್ಮ ಸಂಸ್ಥೆಯಾದ ಕಲಾಶ್ರಯ ದಾಸಕೋಡಿ ಮೂಲಕ ಹೊಸ ಮನೆಯೊಂದನ್ನು ನಿರ್ಮಿಸಿಕೊಟ್ಟಿದ್ದಾರೆ. ಶೃಂಗೇರಿ ಶಾರದಾಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರು ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಸಮ್ಮುಖ ನೂತನ ಮನೆಯನ್ನು ಹಸ್ತಾಂತರಿಸಿದರು.

ತನ್ನ ಸಂಪಾದನೆಯ ಶೇ.50 ರಷ್ಟನ್ನು ಬಡವರ ಸೇವಾ ಕಾರ್ಯಗಳಿಗೆ ವಿನಿಯೋಗಿಸುವ ಕಶೆಕೋಡಿ ಸೂರ್ಯನಾರಾಯಣ ಭಟ್ ಅವರು, ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ, ಆರ್ಥಿಕವಾಗಿ ಸಂಕಷ್ಟದಲ್ಲಿರುವ ಹಿರಿಯರಿಗೆ ವೃದ್ಧಾಪ್ಯ ವೇತನ, ಭೂರಹಿತ ಬಡವರಿಗೆ ಭೂದಾನ. ನಿವೇಶನರಹಿತರಿಗೆ ಮನೆ ನಿರ್ಮಾಣ ಇತ್ಯಾದಿ ಸೇವಾ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆ.

## ಸೇವಾಭಾರತಿ ತಂಡದಿಂದ ಡಾ. ಎಂ. ಮೋಹನ್ ಆಳ್ವರವರ ಭೇಟಿ



**ಮೂಡುಬಿದಿರೆ (ಅ.01)** ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವರವರನ್ನು ಅಕ್ಟೋಬರ್ 01 ರಂದು ಭೇಟಿ ಮಾಡಿ ಸೇವಾಧಾಮದ ಮುಖಾಂತರ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಸೇವೆಯ ಕುರಿತು ಮತ್ತು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಬಗ್ಗೆ ಪ್ರಸ್ತಾಪಿಸಲಾಯಿತು. ಈ ಹಿಂದೆ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ಸಹಕರಿಸಿದ ಡಾ. ಎಂ. ಮೋಹನ್ ಆಳ್ವರವರ ತಂಡಕ್ಕೆ ಸೇವಾಭಾರತಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತು ಈ ಕಾರ್ಯದಲ್ಲೂ ಸಹಕರಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಕು. ರಚನ ಗುಡಿಗಾರ್ ಉಪಸ್ಥಿತರಿದ್ದರು.

## ಸೇವಾಧಾಮಕ್ಕೆ ನೀರಿನ ಹಾಸಿಗೆ ಹಸ್ತಾಂತರ



LIC ಡೆವಲಪ್ಮೆಂಟ್ ಆಫೀಸರಾದ ಶ್ರೀ ಉದಯ್ ಶಂಕರ್ ರವರು ಅಕ್ಟೋಬರ್ 11 ರಂದು ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ, ಸೇವಾಧಾಮಕ್ಕೆ ಭೇಟಿ ನೀಡಿ ನೀರಿನ ಹಾಸಿಗೆಯನ್ನು ಹಸ್ತಾಂತರಿಸಿದ್ದಾರೆ. ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ಧನೇಂದ್ರ ನೀರಿನ ಹಾಸಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಬಂಗಾಡಿ ಸಹಕಾರಿ ವ್ಯವಸಾಯಿಕ ಸಂಘ (ನಿ.),ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ



**ಬಂಗಾಡಿ (ಅ. 04):** ಬಂಗಾಡಿ ಸಹಕಾರಿ ವ್ಯವಸಾಯಿಕ ಸಂಘ (ನಿ.) ದಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 25 ಬ್ಯಾಗ್ ಸಿಮೆಂಟ್ ನ ಬಾಬ್ತು ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ದಯಾನಂದ ಶೆಟ್ಟಿಗಾರ್ ಕೆ ರವರು ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ರವರಿಗೆ ಚೆಕ್ ಹಸ್ತಾಂತರಿಸಿದರು.

## ಸೆಪ್ಟೆಂಬರ್ ತಿಂಗಳ ಸೇವಾಪಥ ಬಿಡುಗಡೆ



ಸೆಪ್ಟೆಂಬರ್ ತಿಂಗಳ ಸೇವಾಭಾರತಿಯ ಸೇವಾಕಾರ್ಯಗಳ ಈ - ನ್ಯೂಸ್ ಲೆಟರ್ ಸೇವಾಪಥವನ್ನು ಕನ್ಯಾಡಿಯ ಡಾ. ರಾಮಕೃಷ್ಣ ಭಟ್ ರವರು ಬಿಡುಗಡೆಗೊಳಿಸಿರುತ್ತಾರೆ..

# ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ 3,05,72,580/-ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ Mangalore Refinery and petrochemicals Limited (MRPL) ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು ಒಂದು ವರ್ಷದ ಅವಧಿಯೊಳಗೆ ನಿರ್ಮಾಣ ಮಾಡಬೇಕಾಗಿದೆ. ಆದರೆ ಅಡಿಪಾಯ ಹಾಗೂ ಬೇಸ್ಮೆಂಟ್ ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ. ಅಲ್ಲದೆ ಮಂಗಳೂರಿನ NMPA ಯ CSR ಅನುದಾನ (ರೂ. 25 ಲಕ್ಷ)ವು ಮಂಜೂರುಗೊಂಡಿರುವ ಪತ್ರ ಲಭ್ಯವಿದ್ದು ಮೊದಲ ಮಹಡಿಯ ನಿರ್ಮಾಣ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದೆ. Mani and Minoo ಟ್ರಸ್ಟ್ ನಿಂದ ಸಹಕಾರ ದೊರಕಿದೆ. ಹಾಗೆ LIC of INDIA ಮತ್ತು ಬೆಂಗಳೂರಿನ BEL ಕಂಪನಿಗೆ CSR ನಿಧಿಗಾಗಿ ಮನವಿಯನ್ನು ಸಲ್ಲಿಸಲಾಗಿದೆ. ಪ್ರಸ್ತುತ ನೆಲಮಹಡಿ ಮತ್ತು ಒಂದನೇ ಮಹಡಿಗೆ ಸಹಕಾರದ ಭರವಸೆಯಿದ್ದು ಉಳಿದ ಎರಡು ಮಹಡಿಗಳಿಗೆ ಬೇರೆ ಬೇರೆ CSR ,ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ

**ಒಟ್ಟು ಮೊತ್ತ ರೂ. 3.05,72,580/- ಅಂದಾಜಿಸಲಾಗಿದ್ದು. ಇದರ ನೆಲಮಹಡಿಗೆ ಮಂಗಳೂರಿನ MRPL ರೂ. 42 ಲಕ್ಷದಷ್ಟು ನೀಡಲಿದೆ.**

ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ ( 12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ, ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS

SEVABHARATHI REGD

237887292400920@cnrb

**Scan and Pay also**

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

## ಸೇವಾನಿಧಿ ದಾನಿಗಳು

- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀ ಕೆ ಪುರಂದರ ರಾವ್, ನಾರ್ಯ
- ಶ್ರೀಮತಿ ದಿವ್ಯ ಪುರಂದರ್, ಬೆಂಗಳೂರು
- ಶ್ರೀಮತಿ ಜಯಂತಿ ಪುರಂದರ್, ನಾರ್ಯ
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀ ನೀಲಕಂಠ, ನಾರ್ಯ
- ಶ್ರೀ ಕೆ ರಮೇಶ್ ಪೂಜಾರಿ, ಕಲ್ಮಂಜ
- ಶ್ರೀ ಬಿ ಪುರಂದರ, ನಾರ್ಯ
- ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
- ಡಾ ರಾಮಕೃಷ್ಣ ಭಟ್ ಜಿ. ಎನ್, ಕನ್ಯಾಡಿ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರ್
- ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
- ಹೋಟೆಲ್ ಬಾಂಬೆ ಡೈನ್, ಉಜಿರೆ
- ಬೇಬಿ ಶ್ರೀ ಬಿಲ್ವನಿ, ಉಜಿರೆ
- ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
- ಶ್ರೀ ಬಾಲಕೃಷ್ಣ ರಾವ್ ಕೆ, ಕನ್ಯಾಡಿ
- ಶ್ರೀ ಜಯಾನಂದ ಎಂ, ಕನ್ಯಾಡಿ
- ಶ್ರೀ ಬಿ ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
- ಶ್ರೀಮತಿ ಸವಿತಾ ಎಮ್ ರಾವ್, ಕನ್ಯಾಡಿ
- ಶ್ರೀ ಪುರುಷೋತ್ತಮ್ ಡಿ ಎ, ಧರ್ಮಸ್ಥಳ
- ಶ್ರೀ ಕೆ ರಾಘವೇಂದ್ರ ಶಾಸ್ತ್ರೀ, ಧರ್ಮಸ್ಥಳ
- ಶ್ರೀ ಕಾರ್ತಿಕ್ ಕೆ, ನೇತ್ರವತಿ
- ಶ್ರೀ ಶಿವಕುಮಾರ್, ಉಜಿರೆ
- ಶ್ರೀ ಮಧುಸೂಧನ್, ಉಜಿರೆ
- ಶ್ರೀಮತಿ ಬಬಿತಾ, ಕನ್ಯಾಡಿ
- ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
- ಶ್ರೀ ಸಂತೋಷ್ ಕೆ, ಕೊಕ್ಕಡ

## ಮಹನೀಯ ದಾನಿಗಳು

- ಶ್ರೀ ಉದಯ್ ಕುಮಾರ್, ಲಾಯಿಲ
- ಶ್ರೀ ವಾಸುದೇವ ಎಸ್, ಕಡಬ
- ಕು. ಸ್ವಾತಿ ಸುಧೀರ್ ಶೆಟ್ಟಿ, ಶಿರಸಿ
- ಶ್ರೀ ಎಸ್ ವಿಠ್ಠಲ ರಾವ್, ಕನ್ಯಾಡಿ
- ಶ್ರೀ ಜಿ ಎಸ್ ನಟೇಶ್, ಶಿವಮೊಗ್ಗ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀಮತಿ ಜಾಹ್ನವಿ ಆರ್ ಭಟ್, ಕಾವೂರು
- ಶ್ರೀಮತಿ ಪ್ರಮೀಳಾ, ಮೂಡಿಗೆರೆ
- ಶ್ರೀ ಎಸ್ ಆರ್ ಸಿಂಧಿಯಾ, ಬೆಂಗಳೂರು
- ಶ್ರೀಮತಿ ವಿನುತಾ, ಕಾಸರಗೋಡು
- ಶ್ರೀ ಕೌಸ್ತುಭ ಶ್ರೀಕೃಷ್ಣ ಪಟವರ್ಧನ, ಪುಣೆ
- ಶ್ರೀ ಚಂದ್ರಶೇಖರ್, ನಿಡ್ಲೆ
- ಕು ಸಂತೃಪ್ತಿ ಆರ್ ಫಡ್ಕೆ, ಬೆಳ್ತಂಗಡಿ
- ಶ್ರೀ ರಜತ್ ರಾವ್, ಧರ್ಮಸ್ಥಳ
- ಶ್ರೀ ಯು ಬಿ ಮನೋಹರ್ ರಾವ್, ಕನ್ಯಾಡಿ
- ಶ್ರೀ ಶೈಲೇಶ್ ಎಮ್ ರಾವ್, ಕನ್ಯಾಡಿ
- ಶ್ರೀ ಲಿಖಿತ್ ರೈ, ಬಂಟ್ವಾಳ
- ಹೋಟೆಲ್ ಉಡುಪಿ ದೋಸಾ ಕ್ಯಾಂಪ್, ನಿಡ್ಲೆ
- ಶ್ರೀ ಸಾಯಿ ಬೇಕರಿ, ಉಜಿರೆ
- ಶ್ರೀ ಸತ್ಯಪ್ರಿಯ ಕಲ್ಲೂರಾಯ, ಸೌತಡ್ಕ
- ಶ್ರೀ ಪ್ರಕಾಶ್ ಭಂಡಾರಿ, ಮೂಡು ಪೆರಾರ
- ಶ್ರೀಮತಿ ವಿದ್ಯಾ ಬೆಂಡೆ, ಮುಂಡಾಜೆ
- ಶ್ರೀ ಜಯ ಪೂಜಾರಿ, ಮಲ್ಪೆ
- ಶ್ರೀ ಹರೀಶ್ ಪ್ರಸಾದ್, ಕೊಪ್ಪಲತೋಟ
- ಶ್ರೀ ಸುಧಾಕರ್ ಕೆ ಎಸ್, ಧರ್ಮಸ್ಥಳ
- ಶ್ರೀ ಮಾರುತಿ ಗುರೂಜಿ, ಬಂಗಾರಮಕ್ಕಿ
- ಮಾಸ್ಟರ್ ಅದ್ವೈತ ಅಜಯ್ ನಾಯ್ಕ, ಹೊನ್ನಾವರ

## ವಸ್ತು ರೂಪದಲ್ಲಿ ದೇಣಿಗೆ

- ಉಜಿರೆ ಹವ್ಯಕ ವಲಯ, ಉಜಿರೆ
- ಶ್ರೀ ಶ್ರೀನಿವಾಸ ಪೂಜಾರಿ, ಮೆಲ್ಕಾರ್
- ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್, ಸೌತಡ್ಕ
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀ ಉದಯಶಂಕರ್ ಕೆ, ಅರಸಿನಮಕ್ಕಿ

## ಸಂಘ ಸಂಸ್ಥೆಗಳು

- ರೋಟರಿ ಕ್ಲಬ್, ತರೀಕೆರೆ
- ದಿ ಕ್ಯಾಂಪ್ಕೋ ಲಿಮಿಟೆಡ್, ಮಂಗಳೂರು



## ಪುಣೆಯ ಶ್ರೀ ಕೌಸ್ತುಭ ಶ್ರೀ ಕೃಷ್ಣ ಪಟವರ್ಧನ್ ರವರಿಂದ ನೂತನ ಕಟ್ಟಡಕ್ಕೆ ದೇಣಿಗೆ.

**ಕನ್ಯಾಡಿ (ಅ. 31):** ಪುಣೆಯ ಶ್ರೀ ಕೌಸ್ತುಭ ಶ್ರೀಕೃಷ್ಣ ಪಟವರ್ಧನ್ ರವರು ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಬೆನ್ನುಹುರಿ ಅಪಘಾತಕ್ಕೊಳಗಾದ ಉಡುಪಿಯ ಶ್ರೀ ಜಗದೀಶ್ ಕಾಂಚನ್ ರವರ ಸ್ನೇಹಿತರಾಗಿದ್ದು ಇವರ ಸಹಕಾರದಲ್ಲಿ ದೇಣಿಗೆಯನ್ನು ನೀಡಿ ಕಟ್ಟಡ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭ ಹಾರೈಸಿದರು.

## ಸೇವಾನಿಕೇತನ ಕಾರ್ಯಾಲಯದ ಉದ್ಘಾಟನಾ ಸಮಾರಂಭಕ್ಕಾಗಿ ಪೂರ್ವಭಾವಿ ಸಭೆ



ಸೇವಾಭಾರತಿಯ ನೂತನ ಕಟ್ಟಡದಲ್ಲಿ ಸೇವಾನಿಕೇತನ ಕಾರ್ಯಾಲಯದ ಉದ್ಘಾಟನಾ ಸಮಾರಂಭಕ್ಕಾಗಿ ಪೂರ್ವಭಾವಿ ಸಭೆ ಇಂದು ಸೇವಾನಿಕೇತನದಲ್ಲಿ ಜರುಗಿತು

## ಕನ್ಯಾಡಿ ಸೇವಾಭಾರತಿಯಿಂದ ತರೀಕೆರೆಯಲ್ಲಿ 6 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ




**ತರೀಕೆರೆ (ಅ.29):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಸೆಪ್ಟೆಂಬರ್ ತಿಂಗಳಿನಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆಯಾದ ಸಂದರ್ಭದಲ್ಲಿ 30 ಗಾಲಿಕುರ್ಚಿಯನ್ನು ನೀಡುವುದಾಗಿ ನಿರ್ಧರಿಸಿದ್ದು ಅದರಲ್ಲಿ 6 ಗಾಲಿಕುರ್ಚಿಯನ್ನು ರೋಟರಿ ಕ್ಲಬ್ ನ ಸಹಕಾರದೊಂದಿಗೆ ಸೇವಾಭಾರತಿಯ ಅಂಗಸಂಸ್ಥೆಯಾದ ಸೇವಾಧಾಮದಿಂದ ಗುರುತಿಸಲ್ಪಟ್ಟ ಬೆನ್ನುಹುರಿ ಅಪಘಾತಕ್ಕೊಳಗಾದ ತರೀಕೆರೆಯ ಶ್ರೀ ಜಯರಾಮ್, ಶ್ರೀ ಕುಮಾರ್ ಬೋವಿ, ಹಲಸೂರಿನ ಶ್ರೀ ಮಹೇಶ್,ಉಡೆವದ ಶ್ರೀ ಅಶೋಕ್, ಗುಲ್ಲದ್ಮನೆಯ ಶ್ರೀ ಯೋಗೀಶ್, ಕಡೂರಿನ ಶ್ರೀ ಲೋಕೇಶ್ ರವರಿಗೆ ಗಾಲಿಕುರ್ಚಿ ವಿತರಣಾ ಕಾರ್ಯಕ್ರಮವನ್ನು ಅಕ್ಟೋಬರ್ 29 ರಂದು ತರೀಕೆರೆಯಲ್ಲಿ ನಡೆಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ರೋಟರಿ ಸಂಸ್ಥೆಯ ಅಧ್ಯಕ್ಷರಾದ ರೊ|ರವಿಕುಮಾರ್ ಬಿ.ಪಿ ರವರು ಫಲಾನುಭವಿಗಳಿಗೆ ಶುಭಹಾರೈಸಿ ವಿಶ್ವಾಸ ಬದುಕಿಗಾಗಿ ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ತರೀಕೆರೆ ರೋಟರಿ ಸಂಸ್ಥೆಯ ಕಾರ್ಯದರ್ಶಿ ರೊ| ಪ್ರವೀಶ್ ಪಿ, ಸಹಾಯಕ ಗವರ್ನರ್ ರೊ| ಪ್ರವೀಣ್ ನಾಹರ್, ಸದಸ್ಯರು ರೊ| ಜಯರಾಮ್ ಟಿ, ರೊ| ಸಂತೋಷ್ ಟಿ. ಎಚ್, ರೊ| ಡಾ. ಚಂದ್ರಶೇಖರ್ ಬಿ.ಜಿ, ಡಾ. ರವಿಶಂಕರ್, ಡಾ. ಹೇಮಚಂದ್ರ, ತರೀಕೆರೆ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರು ಮೀರಾ ವಾಸು ಮತ್ತು ಸೇವಾಭಾರತಿಯ ಕಾರ್ಯಕ್ರಮ ಸಂಯೋಜಕರಾದ ಶ್ರೀ ನಾಗಾರ್ಜುನ ಡಿ. ಎ ಉಪಸ್ಥಿತರಿದ್ದರು.


ರೋಟರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಶ್ರೀನಿವಾಸ ಸ್ವಾಗತಿಸಿ, ಸಹ ಶಿಕ್ಷಕರಾದ ಜ್ಯೋತಿ ಕಾರ್ಯಕ್ರಮವನ್ನು ನಿರೂಪಿಸಿ, ದೈಹಿಕ ಶಿಕ್ಷಕರಾದ ಶ್ರೀ ಮಲ್ಲೇಶಪ್ಪ ವೈ ಆರ್ ಧನ್ಯವಾದವಿತ್ತರು.


## ಬೈಂದೂರು ಶಾಸಕರ ನೇತೃತ್ವದಲ್ಲಿ ಪೂರ್ವಭಾವಿ ಸಭೆ



**ಬೈಂದೂರು (ಸೆ.26):** ಬೈಂದೂರು ಶಾಸಕರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ ಇವರ ನೇತೃತ್ವದಲ್ಲಿ, ಸಮೃದ್ಧ ಬೈಂದೂರು ಯೋಜನೆಯಲ್ಲಿ ಬೈಂದೂರು ತಾಲೂಕಿನ ಪಡುವರಿ ಗ್ರಾಮದ ಹೇನಬೇರು ಶಾಲೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರದ ಉದ್ದೇಶಿತ ಕಟ್ಟಡದ ಉದ್ಘಾಟನಾ ಸಮಾರಂಭದ ಪೂರ್ವಭಾವಿ ಸಭೆಯನ್ನು ನಡೆಸಲಾಯಿತು. ಸ್ಥಳೀಯ ಪ್ರಮುಖರಾದ ಶ್ರೀ ಪಾಂಡುರಂಗ ಪಡಿಯಾರ್ , ಶ್ರೀ ಸುರೇಶ್ ಬಟ್ವಾಡಿ, ಸೇವಾಭಾರತಿಯ ಶ್ರೀ ಕೆ ವಿನಾಯಕ ರಾವ್ ಮತ್ತು ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ರವರು ಉಪಸ್ಥಿತರಿದ್ದರು.

# ಸೇವಾ ಸಂಗಮ



ಅಕ್ಟೋಬರ್ ತಿಂಗಳ ಸೇವಾ ಸಂಗಮ ಆನ್ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಶಿವಮೊಗ್ಗ, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಸಂಯೋಜಕರು ಶ್ರೀ ರಾಬರ್ಟ್ ಎಂ ರವರು ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಸರಕಾರದ ವಿವಿಧ ಸೌಲಭ್ಯದ ಬಗ್ಗೆ ಮತ್ತು ಅದರ ಅರ್ಜಿ ಸಲ್ಲಿಕೆಯ ಪ್ರಕ್ರಿಯೆಯ ಬಗ್ಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 73 ಮಂದಿ ಭಾಗವಹಿಸಿದ್ದರು.

## ಅಕ್ಟೋಬರ್ ತಿಂಗಳ ಸೇವಾ ಕಾರ್ಯಗಳು:

| | | |
|---|---|---|
| 1.ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ | - | 16 |
| 2. ಹೊಸ ಗುರುತಿಸುವಿಕೆ | - | 7 |
| 3.ನಿಯೋ ಮೋಶನ್ ವಿಥ್ ಕಾರ್ಟ್ ವಿತರಣೆ | - | 3 |
| 4. ಪುನಶ್ಚೇತನವನ್ನು ಪಡೆದುಕೊಳ್ಳುತ್ತಿರುವವರು | - | 7 |
| 5. ಗಾಲಿಕುರ್ಚಿ ವಿತರಣೆ | - | 24 |
| 6. ನೀರಿನ ಹಾಸಿಗೆ | - | 1 |
| 7. ಗಾಳಿಯ ಹಾಸಿಗೆ | - | 1 |

## ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ಶ್ರೀ ಮಾರುತಿ ಗುರೂಜಿ ರವರಿಂದರೂ. 25,000 ದೇಣಿಗೆ



**ಬಂಗಾರಮಕ್ಕಿ(ಅ:19):** ಶ್ರೀ ಕ್ಷೇತ್ರ ಬಂಗಾರಮಕ್ಕಿ ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್, ಹೇಮಾಪುರ ಮಹಾ ಪೀಠಂನ ಶ್ರೀ ಮಾರುತಿ ಗುರೂಜಿಯವರನ್ನು ಅಕ್ಟೋಬರ್ 19 ರಂದು ಸೇವಾಭಾರತಿಯಿಂದ ಭೇಟಿ ಮಾಡಲಾಯಿತು. ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕಾಗಿ ಗುರೂಜಿಯವರು ರೂ.25,000/- ದೇಣಿಗೆಯನ್ನು ನೀಡಿ ಕಟ್ಟಡ ನಿರ್ಮಾಣ ಶೀಘ್ರ ನೆರವೇರುವಂತೆ ಶುಭಹಾರೈಸಿದರು. ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಕೃತಜ್ಞತೆ ವ್ಯಕ್ತಪಡಿಸಿದರು.

## ಕಾಸರಗೋಡಿನ ಶ್ರೀಮತಿ ವಿನುತಾರವರಿಂದ ಸೇವಾಧಾಮದ ಒಂದು ಹೊತ್ತಿನ ಊಟಕ್ಕೆ ದೇಣಿಗೆ



**ಸೌತಡ್ಕ (ಅ.04):** ಕಾಸರಗೋಡಿನ ಶ್ರೀಮತಿ ವಿನುತಾ ರವರು ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಅಕ್ಟೋಬರ್ 04 ರಂದು ಭೇಟಿ ನೀಡಿ ಒಂದು ಹೊತ್ತಿನ ಊಟಕ್ಕೆ ರೂ. 3001 /- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**ಡಾ. ಟಿ ಕೃಷ್ಣಮೂರ್ತಿ,**
ಉಜಿರೆ




**ಕು| ಅಕ್ಷತಾ,**
ನಿಡ್ಲೆ



**ಶ್ರೀ ಕುಸುಮಾಧರ,**
ಬಂದಾರು



**ಶ್ರೀ ಲಿಖಿತ್ ರೈ,**
ಪುತ್ತೂರು



**ಶ್ರೀಮತಿ ಅರುಣ ಜಿ,**
ಬೆಂಗಳೂರು




**ಶ್ರೀಮತಿ ಭಾಗ್ಯಶ್ರೀ ಭಂಡಾರ್ಕರ್,** ಮಂಗಳೂರು



**ಶ್ರೀಮತಿ ಕವಿತಾ ಪ್ರಶಾಂತ್,**
ಉಡುಪಿ



**ಶ್ರೀ ಚಂದನ್ ಗುಡಿಗಾರ್,**
ಅಲೆಕ್ಕಿ



**ಶ್ರೀ ಮನೋಹರ್ ರಾವ್ ಮತ್ತು ಶ್ರೀಮತಿ ಸವಿತಾ ಎಂ ರಾವ್,** ಕನ್ಯಾಡಿ



**ಶ್ರೀ ರಜತ್ ಕುಮಾರ್ ಜೆ. ಡಿ,** ವೇಣೂರು



**ಬೇಬಿ ಅರ್ಹ ವಿ ಶೆಟ್ಟಿ,**
ಮೂಡಿಗೆರೆ



**ಮಾಸ್ಟರ್| ಅದ್ವೈತ್ ಅಜಯ್ ನಾಯ್ಕ್ ,** ಹೊನ್ನಾವರ

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಅಕ್ಟೋಬರ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



**ಶ್ರೀ ಅಶ್ರಫ್ , ಪುತ್ತೂರು**



## ನಿಮಗಿದು ತಿಳಿದಿರಲಿ

### ಸ್ಪೈನಾ ಬಿಫಿಡಾ (Spina Bifida) ಎಂದರೆ ಏನು?

ಸ್ಪೈನಾ ಬಿಫಿಡಾ ಒಂದು ಜನ್ಮಜಾತ (Congenital) ನ್ಯೂರೋಲಾಜಿಕಲ್ ಸ್ಥಿತಿ (neurological condition) ಆಗಿದ್ದು, ಗರ್ಭದಲ್ಲಿರುವ ಶಿಶುವಿನ ಬೆನ್ನುಹುರಿ (spinal cord) ಸರಿಯಾಗಿ ರೂಪುಗೊಳ್ಳದಿರುವುದರಿಂದ ಉಂಟಾಗುತ್ತದೆ. ಅಂದರೆ ಬೆನ್ನುಹುರಿಯ ಎಲುಬುಗಳು (vertebrae) ಸಂಪೂರ್ಣವಾಗಿ ಮುಚ್ಚದೆ, ಅದರ ಒಳಗಿನ ಭಾಗವಾದ ನರವಾಹಿನಿ (spinal cord) ಭಾಗಶಃ ಹೊರಗೆ ಕಾಣುವ ಸ್ಥಿತಿ.

### ಸ್ಪೈನಾ ಬಿಫಿಡಾದ ಪ್ರಕಾರಗಳು (Types of Spina Bifida):

- Spina Bifida Occulta (ಮೂಳೆಯೊಳಗಿನ ಸಣ್ಣ ತೊಂದರೆ):
- ಅತ್ಯಂತ ಸಾಮಾನ್ಯ ಮತ್ತು ಅಲ್ಪ ತೀವ್ರತೆಯ ರೂಪ.
- ಚರ್ಮದ ಮೇಲಿನ ಲಕ್ಷಣಗಳು ಮಾತ್ರ ಕಾಣಬಹುದು (ಉದಾ: ಕೂದಲು, ಚಿಕ್ಕ ಗುಬ್ಬಚ್ಚೆ ಅಥವಾ ಗುರುತು).
- ಸಾಮಾನ್ಯವಾಗಿ ಲಕ್ಷಣಗಳು ಇಲ್ಲ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ :** ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 6000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 10000/ - ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

## DONATE & JOIN US IN OUR MISSION


A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ದೇಹ ಬಲಹೀನವಾದರೂ ಸೇವೆಯಿಂದಲೇ ಸಮಾಜಕ್ಕೆ ಸ್ಫೂರ್ತಿಯಾದ ಉಜಿರೆಯ ಕು. ಅಂಜನಾದೇವಿ




ಅಂಜನಾದೇವಿ ಇವರು ಮೂಲತಃ ಉಜಿರೆ ಗ್ರಾಮದ ಬೆಳ್ತಂಗಡಿ ತಾಲೂಕಿನ ನಿವಾಸಿಯಾಗಿದ್ದು, ಸೆಪ್ಟೆಂಬರ್ 27 1963 ರಲ್ಲಿ ದಿ| ಬಿ ಮಂಜುನಾಥ್ ಪ್ರಭು ಮತ್ತು ದಿ| ಅರುಣದೇವಿ ದಂಪತಿಯ ಪುತ್ರಿಯಾಗಿ ಜನಿಸಿದರು. ಬಾಲ್ಯ ಜೀವನವು ಎಲ್ಲಾ ಜನರ ಜೀವನದಲ್ಲಿ ಅತ್ಯಂತ ಸುಂದರವಾದ ಕ್ಷಣ ಮತ್ತು ಪ್ರಮುಖ ಹಂತವಾಗಿರುತ್ತದೆ. ಆದರೆ ಅಂಜನಾದೇವಿಯವರ ಬಾಲ್ಯ ಅತ್ಯಂತ ಕಷ್ಟಕರವಾಗಿತ್ತು ಮತ್ತು ಅನೇಕ ಸಮಸ್ಯೆಯನ್ನು ಎದುರಿಸಿ ಬಂದವರು. ತನ್ನ ಸಣ್ಣ ವಯಸ್ಸಿನಲ್ಲೇ ಎಂದೂ ಮರೆಯದ ಕಹಿ ಘಟನೆ ಅವರ ಜೀವನದಲ್ಲಿ ನಡೆದು ಹೋಯಿತು. ಮೂರೂವರೆ ವರ್ಷ ಇರುವಾಗ ಬಿದ್ದು ಆಸ್ಪತ್ರೆಗೆ ದಾಖಲಾದರು. ಈ ಸಂದರ್ಭದಲ್ಲಿ ಇವರಿಗೆ 5- 6 ತಿಂಗಳು ನಿರಂತರವಾಗಿ ಜ್ವರ ಬಂದು ನರಗಳು ದುರ್ಬಲವಾಗಿ ಪೋಲಿಯೋಗೆ ತುತ್ತಾದರು. ಸಣ್ಣ ವಯಸ್ಸು ಏನೂ ತಿಳಿಯದ ಆ ಎಳೆಯ ವಯಸ್ಸಿನಲ್ಲಿ ಅನೇಕ ಕಷ್ಟಗಳು ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಿತು. ನಂತರ ಮಲಗಿದಲ್ಲೇ ಇದ್ದು ಜೀವನವನ್ನು ನಡೆಸುತ್ತ ಬಂದರು. ಆಯುರ್ವೇದಿಕ್ ಮದ್ದುಗಳನ್ನು ಮಾಡುತ್ತ ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಳ್ಳುತ್ತ 7 ವರ್ಷದ ನಂತರ ಅಂಬೆಕಾಲಿನಲ್ಲಿ ಮುಂದೆ ಮುಂದೆ ಸಾಗಲು ಪ್ರಾರಂಭಿಸಿದರು. ನಂತರ ಅಂಕೋಲದಲ್ಲಿ ಆಯುರ್ವೇದಿಕ್ ಮದ್ದು ಮಾಡಿದ ಪರಿಣಾಮವಾಗಿ ತನ್ನ ಶಕ್ತಿಯಿಂದ ಎದ್ದು ನಿಂತು ನಡೆಯಲು ಪ್ರಯತ್ನ ಪಡುತ್ತಿದ್ದರು. ಒಂದೊಂದೇ ಹೆಜ್ಜೆ ಮುಂದಿಡುತ್ತ ತನ್ನ ಜೀವನದ ಹುರುಪನ್ನು ಮತ್ತೆ ಕಂಡುಕೊಂಡರು. ತಾನು ಮೊದಲಿನಂತೆ - - ಆಗುವೆ ಎಂಬ ಹಂಬಲವನ್ನು ಮತ್ತು ಭರವಸೆಯನ್ನು ಇಟ್ಟುಕೊಂಡರು. ನಂತರ 10 ವರ್ಷದ ಬಳಿಕ ಸಂಪೂರ್ಣವಾಗಿ ನಡೆಯದಿದ್ದರೂ ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಂಡು ಶಾಲೆಗೆ ಹೋಗಲು ಪ್ರಾರಂಭಿಸಿದರು. ಉಜಿರೆ SDM ಕನ್ನಡ ಮೀಡಿಯಂನಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣವನ್ನು ಮತ್ತು ಬೆಳ್ತಂಗಡಿ ಜೂನಿಯರ್ ಕಾಲೇಜಿನಲ್ಲಿ ಪಿಯುಸಿ ಶಿಕ್ಷಣವನ್ನು(ದೂರಶಿಕ್ಷಣ) ಮನೆಯಲ್ಲಿಯೇ ಇದ್ದುಕೊಂಡು ಪೂರ್ಣಗೊಳಿಸಿದರು. ನಂತರ ಬೆಂಗಳೂರಿನತ್ತ ಪ್ರಯಾಣವನ್ನು ಬೆಳೆಸಿದರು. ಅಲ್ಲಿಯೇ ಇದ್ದುಕೊಂಡು RVTI ಅಲ್ಲಿ ಜಾಬ್ ಒರಿಯನ್ ಟೇಷನ್ ಕೋರ್ಸ್ ಮುಗಿಸಿದರು. ಬೆಂಗಳೂರಿನಲ್ಲಿ ಕೆಲಸಗಳನ್ನು ಹುಡುಕಲು ಮುಂದಾದರು. BEL, ISRO ಹೀಗೆ ಹಲವಾರು ದೊಡ್ಡ - ದೊಡ್ಡ ಕಂಪನಿಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ಪಡೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಇಂಟರ್ವ್ಯೂ ನೀಡಿದ್ದರು. ಅಲ್ಲಿ ಕೆಲಸವನ್ನು ಪಡೆದುಕೊಂಡರೂ ಸಹ ಇವರ ಆರೋಗ್ಯ ಸಮಸ್ಯೆಯಿಂದ ಕೆಲಸವನ್ನು ಮಾಡಲು ಅಸಾಧ್ಯವಾಗುತ್ತಿತ್ತು.. ದೂರದ ಪ್ರಯಾಣವನ್ನು ಮಾಡಲು ಕಷ್ಟವಾಗುವುದರಿಂದ ಯಾವುದೇ ಕೆಲಸಕ್ಕೂ ಸೇರಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ನಂತರ ಮನೆಯಲ್ಲಿಯೇ ಇದ್ದು ಉಲ್ಲನ್ ಹೆಣೆಯುವ ಹಾಗೂ ಬೇರೆ ಬೇರೆ ಕಸೂತಿಯನ್ನು ಮಾಡಲು ಪ್ರಾರಂಭಿಸಿದರು. ನಂತರ ಮೂರು ನಾಲ್ಕು ವರ್ಷ ರೇಡಿಯೋ ರಿಪೇರಿ ಮಾಡಲು ಪ್ರಾರಂಭಿಸಿದರು. ನಂತರ ಎಲ್ಲರಂತೆ ತಾನು ಹೊರಗೆ ಹೋಗಿ ದುಡಿಯಬೇಕು ತನ್ನ ಕಾಲಮೇಲೆ ನಾನು ನಿಂತುಕೊಳ್ಳಬೇಕು ಎನ್ನುವ ಹಂಬಲದಿಂದ ಆನ್ಲೈನ್ ಅಪ್ಲಿಕೇಶನ್ ಹಾಕಿ ಉಜಿರೆಯಲ್ಲಿ STD ಬೂತ್ ಕೆಲಸವನ್ನು ಪ್ರಾರಂಭಿಸಿದರು. ಸುಮಾರು 22 ವರ್ಷಗಳ ಕಾಲ ಕೆಲಸವನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದರು.

ಇದರ ಜೊತೆ ಜೊತೆಗೆ ಅಂಗವಿಕಲರ ಬಾಳಲ್ಲಿ ಬೆಳಕಾಗಬೇಕೆನ್ನುವ ದೃಷ್ಟಿಯಿಂದ ಸಮಾಜ ಸೇವೆಯನ್ನು ಮಾಡುತ್ತಿದ್ದರು. ಶಿಬಿರವನ್ನು ಆಯೋಜನೆ ಮಾಡುವುದು, ಅವರ ಕಷ್ಟಗಳಿಗೆ ಸ್ಪಂದಿಸುತ್ತಾ ಅವರ ಜೊತೆ ದಿನವನ್ನು ಕಳೆಯುತ್ತಾ VRW ಆಗಿ ಕೆಲಸ ಕಾರ್ಯವನ್ನು ನಿರ್ವಹಿಸಿದರು. ಹೀಗೆ ಕೆಲಸವನ್ನು ಮುಂದುವರಿಸಿಕೊಳುತ್ತ ಹೋಗುತ್ತಿರುವಾಗ ಎಂದಿನಂತೆ ಕೆಲಸಕ್ಕೆ ಬಂದ ವೇಳೆ ಮೆಟ್ಟಿಲು ಹತ್ತಬೇಕಾದರೆ ಕೆಳಕ್ಕೆ ಬಿದ್ದು ಬೆನ್ನುಹುರಿ ಅಪಘಾತ ಮತ್ತು ಹಿಪ್ ಡಿಸ್ಲೊಕೇಶನ್ ಗೆ ಒಳಗಾದರು. ನಂತರ ಹಿಪ್ ಡಿಸ್ಲೊಕೇಶನ್ ನ ಸರ್ಜರಿ ಆಗಿ ಪುನಃ 6 ತಿಂಗಳು ಮನೆಯಲ್ಲಿಯೇ ಇದ್ದರು.. ಈ ಅಪಘಾತವಾದ ನಂತರ ನಡೆದಾಡಲು ಸಾಧ್ಯವಾಗುತ್ತಿರಲಿಲ್ಲ ಸಂಪೂರ್ಣ ಕೂತಲ್ಲಿಯೇ ಇದ್ದು ಜೀವನ ನಡೆಸಬೇಕಾದ ಪರಿಸ್ಥಿತಿ ಅಂಜನಾದೇವಿ ಅವರಿಗೆ ಎದುರಾಯಿತು. ಆದರೂ ಮನೆಯಲ್ಲಿಯೇ ಇದ್ದು ಅವರಿಂದಾದ ಸಮಾಜ ಸೇವೆಯನ್ನು ಮಾಡುತ್ತ ಇದ್ದರು. ಅಂಗವಿಕಲರ ಕ್ಷೇತ್ರದಲ್ಲಿ ಇವರು ಮಾಡುತ್ತಿದ್ದ ಸೇವೆಯನ್ನು ಪರಿಗಣಿಸಿ 2013 ರಲ್ಲಿ ರಾಷ್ಟ್ರ ಪ್ರಶಸ್ತಿ ಮತ್ತು 2014 ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿಯ ವಾರಸುದಾರರಾದರು.

ಹೀಗೆ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿಯನ್ನು ಪಡೆದ ಹೆಗ್ಗಳಿಕೆ ಇವರದಾಗಿದೆ. ಪ್ರಸ್ತುತ ಇದೀಗ ಮನೆಯ ಹತ್ತಿರವೇ ಚಿಕ್ಕ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರವನ್ನು ಮಾಡುತ್ತ ಜೀವನವನ್ನು ಸಾಗಿಸುತ್ತಿದ್ದಾರೆ. ಕೈಯಲ್ಲಾದ ಧನಸಹಾಯ ಮಾಡುತ್ತಾ ಕೊಡುಗೈದಾನಿಯಾಗಿಯೂ ಆಗಿರುತ್ತಾರೆ. ಸ್ವಾವಲಂಬಿಯಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಿರುವ ಇವರ ಕಥೆ ಎಲ್ಲರಿಗೂ ಸ್ಫೂರ್ತಿದಾಯಕವಾಗಿದೆ. ಇವರ ಯಶಸ್ಸಿಗೆ ನಾವೆಲ್ಲರೂ ಶುಭ ಹಾರೈಸೋಣವೇ.

**Mob NO- 9448189037**